

# ಸೇತುಪತಿ ಕೈತುಂಬಾ ಕೆಲಸ

■ ವಿಶಾಖ ಎನ್.

ಲಾಕ್‌ಡೌನ್‌ನಲ್ಲೂ ಕೆಲವು ನಟ–ನಟಿಯರು ದೂಳೆಬ್ಬಿಸಿದ್ದು ದಿಟ. ಕೋವಿಡ್ ಬಾಧಿಸುತ್ತಿರುವಾಗಲೂ ಚಲನಚಿತ್ರ ಭವಿಷ್ಯ ಉಜ್ವತ್ತಾ ಕುಳಿತಿದ್ದ ಅನೇಕರನ್ನು ಡೇಟ್ಸ್ ಉಸಾಬರಿ ಕಾಡುತ್ತಿದೆ. ಸೂಪರ್ ಸ್ಟಾರ್‌ಗಳಾದರೆ ಒಂದು ಸಿನಿಮಾ ಮುಗಿಯುವವರೆಗೆ ಇನ್ನೊಂದರ ಕಡೆಗೆ ಕಣ್ಣು ಹಾಯಿಸದೇ ಇರಬಹುದು. ಕೆಲವು ಸಮೃದ್ಧ ನಟ–ನಟಿಯರಿಗೆ ಅದು ಸಾಧ್ಯವಿಲ್ಲ. ತಮಿಳು ನಟ ವಿಜಯ್ ಸೇತುಪತಿ ಕೂಡ ಈಗ ಸಮೃದ್ಧ ನಟರೇ ಹೌದು. ತಮಿಳಿನ 'ಮಾಸ್ಟರ್' ಸದ್ದು ಮಾಡುತ್ತಿರುವಾಗಲೇ ವಿಜಯ್ ಸೇತುಪತಿ ಬೇರೆ ಬೇರೆ ಕಾರಣಗಳಿಂದಾಗಿ ಸುದ್ದಿಯಲ್ಲಿದ್ದಾರೆ. ಅವರ ಅಭಿನಯದ 'ಉಪ್ಪೆನ' ತೆಲುಗು ಚಿತ್ರದ ಕುರಿತೂ ಒಳ್ಳೆಯ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಮಲಯಾಳಂ ಸಿನಿಮಾವೊಂದನ್ನು ಕೂಡ ಅವರು ಒಪ್ಪಿಕೊಂಡಿರುವ ಸುದ್ದಿ ಇದೆ. ಕನ್ನಡ ಹೊರತುಪಡಿಸಿ ದಕ್ಷಿಣ ಭಾರತದ ಎಲ್ಲ ಭಾಷೆಗಳ ಚಿತ್ರಗಳನ್ನು ಅವರು ಒಪ್ಪಿಕೊಳ್ಳತೊಡಗಿರುವುದು ಅವರ ಮಾರುಕಟ್ಟೆ ವ್ಯಾಪಕವಾಗುತ್ತಿರುವುದಕ್ಕೆ ಉದಾಹರಣೆ.

'ಮಕ್ಕಳ್ ಸೆಲ್ವನ್' ಎಂದೇ ಕರೆಸಿಕೊಳ್ಳುವ ವಿಜಯ್ ಸೇತುಪತಿ 'ಲಾಲ್ ಸಿಂಗ್ ಛಡ್ಡಾ' ಚಿತ್ರದ ಮೂಲಕ ಬಾಲಿವುಡ್‌ಗೂ ಕಾಲಿಡಬೇಕಿತ್ತು. ಅಮೀರ್ ಖಾನ್ ಖುದ್ದು ವಿಮಾನದಲ್ಲಿ ಮುಂಬೈನಿಂದ ಚೆನ್ನೈಗೆ ಹೋಗಿ ಸೇತುಪತಿ ಅವರಿಗೆ ಚಿತ್ರಕಥೆ ಹೇಳಿ, ಅವರ ಪಾತ್ರದ ಪರಿಚಯ ಮಾಡಿಕೊಟ್ಟಿದ್ದರು. ಅಷ್ಟು ದೊಡ್ಡ ಸೂಪರ್‌ಸ್ಟಾರ್ ಹಮ್ಮಿಲ್ಲದೆ ದೂರಕ್ಕೆ ಪ್ರಯಾಣ ಮಾಡಿ, ದಕ್ಷಿಣ ಭಾರತದ ನಟನೊಬ್ಬನ ಪ್ರತಿಭೆ ಗುರುತಿಸಿದ್ದನ್ನು ಕಂಡು ವಿಜಯ್ ಸೇತುಪತಿ ಕರಗಿದ್ದರು. ತಕ್ಷಣವೇ ಆ ಸಿನಿಮಾದಲ್ಲಿ ನಟಿಸಲು ಒಪ್ಪಿಗೆಯನ್ನೂ ಕೊಟ್ಟಿದ್ದರು. ಆದರೀಗ ಅವರು ಅದರಲ್ಲಿ ನಟಿಸುತ್ತಿಲ್ಲ ಎಂಬ ಸುದ್ದಿ ರೆಕ್ಕೆಪುಕ್ಕ ಹಕ್ಕಿಕೊಂಡು ವದಂತಿಯಾಗಿಯೂ ಬದಲಾಗಿದೆ.

ದೇಹತೂಕ ಇಳಿಸಿಕೊಳ್ಳಲು ಒಪ್ಪದೇ ಇರುವ ಕಾರಣ ವಿಜಯ್ ಸೇತುಪತಿ ಆ ಸಿನಿಮಾದಿಂದ ಹೊರಬಂದರು ಎನ್ನುವುದು ವದಂತಿ. ಇದಕ್ಕೆ ಸ್ಪಷ್ಟನೆ ನೀಡಿರುವ ಅವರು, 'ನಾನು ಐದು ತೆಲುಗು ಚಿತ್ರಗಳನ್ನು ಮೊದಲೇ ಒಪ್ಪಿಕೊಂಡಿದ್ದೆ. ಕೋವಿಡ್‌ನಿಂದಾಗಿ ಅವುಗಳ ಚಿತ್ರೀಕರಣದ ದಿನಗಳಲ್ಲಿ ಏರುಪೇರಾಯಿತು. ಹೀಗಾಗಿ ಲಾಲ್ ಸಿಂಗ್ ಛಡ್ಡಾಗೆ ಡೇಟ್ಸ್ ಹೊಂದಿಸಲು ಆಗಲಿಲ್ಲ. ಅಮೀರ್ ಖಾನ್ ಜತೆ ನಟಿಸುವುದು ನನಗೆ ಯಾವತ್ತೂ ಹೆಮ್ಮೆಯ ವಿಷಯ. ಮುಂದೆ ಅವರೊಟ್ಟಿಗೆ ಅಭಿನಯಿಸುವ ಅವಕಾಶಕ್ಕಾಗಿ ಕಾಯುವೆ. ದೇಹತೂಕ ಇಳಿಸಿಕೊಳ್ಳಲು ಆಗದೇ ಪ್ರಾಜೆಕ್ಟ್ ಕೈಬಿಟ್ಟೆ ಎನ್ನುವುದೆಲ್ಲ ಸುಳ್ಳು' ಎಂದಿದ್ದಾರೆ. ■

# ಕೀರ್ತಿಗೊಬ್ಬ...





ಚೆಂದುಳ್ಳಿ ಚೆಲುವೆ ಕೀರ್ತಿ ಸುರೇಶ್‌ಗೆ ಲೈನ್ ಹೊಡೆಯುತ್ತಿದ್ದ ಹೈಕಳೆಲ್ಲ ಮೊನ್ನೆ ಮೊನ್ನೆ ಹಾರ್ಟ್ ಬ್ರೇಕಾಗಿ ನೊಂದುಕೊಂಡರು. ಸ್ವರ ಸಂಯೋಜಕ ಅನಿರುದ್ಧ್ ರವಿಚಂದರ್ ಜತೆಗೆ ಮೈಗೆ ಮೈ ಸೋಕಿ ಕೀರ್ತಿ ನಿಂತಿದ್ದ ಫೋಟೊಗಳು ಹರಿದಾಡಿದ್ದವು. ಇಬ್ಬರೂ ಇದೇ ವರ್ಷ ದಾಂಪತ್ಯಗೀತೆ ಹಾಡಲಿದ್ದಾರೆ ಎಂಬ ಸುದ್ದಿಯೂ ಹಾರಾಡಿತು. ತಮ್ಮ ಸಾಮಾಜಿಕ ಜಾಲತಾಣಗಳ ಖಾತೆಯಲ್ಲಿ ಕೀರ್ತಿ ಬಿಂದಾಸ್ ಆಗಿ ಹಂಚಿಕೊಂಡಿದ್ದ ಫೋಟೊಗಳನ್ನು ನೋಡಿ ಹೀಗೆ ಜನ ಕಥೆ ಕಟ್ಟದೇ ಇರುತ್ತಾರೆಯೇ? ಅದು ಕಥೆಯೋ ಸತ್ಯವೋ ಎನ್ನುವುದನ್ನು ಕೀರ್ತಿ ಆಗಲೀ, ಅನಿರುದ್ಧ್ ಆಗಲೀ ಸ್ಪಷ್ಟಪಡಿಸುವ ಗೊಡವೆಗೆ ಹೋಗಿಲ್ಲ. ಕೀರ್ತಿ ತಂದೆ–ತಾಯಿ ಮಾತ್ರ ಇವೆಲ್ಲ ಬುರ್ನಾಸು ಎಂದು ದೂಳು ಕೊಡವಿದ್ದಾರೆ. ತಮ್ಮ ಮಗಳಿಗೆ ಯಾರೊಟ್ಟಿಗೂ ಮದುವೆ ನಿಶ್ಚಯವಾಗಿಲ್ಲ; ಇದು ಸತ್ಯಸ್ಯ ಸತ್ಯ ಎಂದಷ್ಟೇ ಅವರು ಹೇಳಿದ್ದಾರೆ.

ಕೀರ್ತಿ ಕಳೆದ ವರ್ಷ ಅಕ್ಟೋಬರ್‌ನಲ್ಲಿ ಅನಿರುದ್ಧ್ ಜನ್ಮದಿನದಂದು ಶುಭಾಶಯ ಕೋರಿದ್ದರು. ಅದರ ಸಂದೇಶದಲ್ಲಿ 'ಡಿಯರ್' ಎಂದು ಬರೆದಿದ್ದರು. ಆಡುವವರ ಬಾಯಿಗೆ ಇಷ್ಟೇ ಸಾಕಾಗಿರುವಾಗ ಫೋಟೊಗಳೂ ದೊರೆತರೆ ವದಂತಿ ಹಬ್ಬಿಸದೇ ಬಿಟ್ಟಾರೆಯೇ?

ಮದುವೆಯ ಸುದ್ದಿ ನಿಜವೋ ಸುಳ್ಳೋ ಎನ್ನುವುದು ಹಾಗಿರಲಿಲ್ಲ. ಈ ಇಬ್ಬರ ಕೈಲೂ ದೊಡ್ಡ ದೊಡ್ಡ ಸಿನಿಮಾ ಕೆಲಸಗಳಿವೆ ಎನ್ನುವುದಂತೂ ದಿಟ. ಚಿರಂಜೀವಿ ಜತೆಗೆ ಕೀರ್ತಿ ಅಭಿನಯಿಸುವುದು ನಿಕ್ಕಿಯಾಗಿದೆ. ಅದಲ್ಲದೆ ಇನ್ನೂ ಐದಾರು ಸಿನಿಮಾಗಳಿಗೆ ಸಹಿ ಹಾಕಿದ್ದಾರೆ. ಕಮಲ ಹಾಸನ್ ಅಭಿನಯದ 'ವಿಕ್ರಂ' ತಮಿಳು ಸಿನಿಮಾದ ಹಾಡುಗಳಿಗೆ ಅನಿರುದ್ಧ್ ಮಟ್ಟುಗಳನ್ನು ಹಾಕುತ್ತಿದ್ದಾರೆ. 'ಮಾಸ್ಟರ್' ಚಿತ್ರದ ಅವರ ಸ್ವರ ಸಂಯೋಜನೆಗೆ ಈಗಾಗಲೇ ಶಹಬ್ಬಾಸ್‌ಗಿರಿ ಸಿಕ್ಕಿದ್ದು, ಚಿಕ್ಕ ಪ್ರಾಯದಲ್ಲೇ ಯೂತ್ ಐಕಾನ್ ಎಂಬ ಕೀರ್ತಿ ಕಿರೀಟ ಅವರ ತಲೆಯ ಮೇಲಿದೆ. ಪಕ್ಕದಲ್ಲಿ ಹಸನ್ಮುಖಿ ಕೀರ್ತಿ ನಿಂತರೆ ತಪ್ಪೇನು? ■